ಸಿಸಿ ಃ **452/2024**

**ಚಾಸಾ –1**

**ಪ್ರಾಸಾ –1**

**ಸೋಮವಾರಪೇಟೆ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ ರವರ ನ್ಯಾಯಾಲಯದಲ್ಲಿ**

**ಸಿಸಿ ಃ 422/2024**

ಸಾಕ್ಷಿದಾರರ ಹೆಸರುಃ ಅಬ್ದುಲ್ ಹಮೀದ್
ತಂದೆ ಹೆಸರುಃ ಮುಸತ್ತುನ್ನಿ
ವಯಸ್ಸುಃ **51**
ವೃತ್ತಿಃ ಅಬಕಾರಿ ಉಪ ನಿರೀಕ್ಷಕ
ವಾಸಸ್ಥಳಃ ಪುತ್ತೂರು ವಲಯ.
ಸಾಕ್ಷಿಯು ಕ್ರಮವಾಗಿ ಪ್ರಮಾಣಿಕರಿಸಿದ ದಿನಾಂಕಃ **19-04-2025**

ಮುಖ್ಯ ವಿಚಾರಣೆಃ ಎಪಿಪಿಯವರಿಂದ

ದಿಃ**02-07-2024** ರಿಂದ **06-06-2024** ರವರೆಗೆ ಸೋಮವಾರಪೇಟೆ ಉಪ ವಿಭಾಗದಲ್ಲಿ ಅಬಕಾರಿ ಉಪ ನಿರೀಕ್ಷಕರಾಗಿ ಕೆಲಸ ಮಾಡಿರುತ್ತೇನೆ. ದಿಃ**06-04-2024** ರಂದು ನಾನು ಸಿಬ್ಬಂದಿಗಳಾದ ಚಾಸಾ **2, 3** ರವರೊಂದಿಗೆ ಇಲಾಖಾ ವಾಹನದಲ್ಲಿ ಕುಂಬಾರಗಡಿಗೆ ಗ್ರಾಮದ ವಾಪ್ತಿಯಲ್ಲಿ ಲೋಕ ಸಭಾ ಚುನಾವಣ ಪ್ರಯುಕ್ತ ನೀತಿ ಸಂಹಿತೆ ಜಾರಿಯಲ್ಲಿದ್ದ ಸಮಯದಲ್ಲಿ ಮಾನ್ಯ ಅಬಕಾರಿ ಜಂಟಿ ಆಯುಕ್ತರು ಹಾಗೂ ಉಪ ಆಯುಕ್ತರು ಕೊಡಗು ಜಿಲ್ಲೆ ರವರು ನಿರ್ದೇಶನದಂತೆ, ಸುಮಾರು ಬೆಳಿಗ್ಗೆ **5.15** ಗಂಟೆಗೆ ಕಚೇರಿಯಿಂದ ಹೊರಟು ಈಚಲಬೀಡು ಶನಿವಾರಸಂತೆ ಮಾರ್ಗವಾಗಿ ಸುಮಾರು **25** ಕಿಲೋ ಮೀಟರ್ ಕ್ರಮಿಸಿ ಕುಂಬಾರಗಡಿಗೆ ಗ್ರಾಮದಲ್ಲಿ ಗಸ್ತು ಮಾಡುತ್ತಿದ್ದ ಸಮಯದಲ್ಲಿ ಅಪರಿಚಿತ ವ್ಯಕ್ತಿಯೊಬ್ಬರು ನಮ್ಮ ವಾಹದ ಬಳಿ ಬಂದು ಸಿಬ್ಬಂದಿಯಾದ ಚಾಸಾ **2** ರವರಿಗೆ ಕಿರುಬಿಳಹ ಗ್ರಾಮದ ನಿವಾಸಿಯಾದ ಕುಶಾಲ ಯಾನೆ ಸಿದ್ದೀಖ್ ಬಿನ್ ಪರಮೇಶ ಎಂಬಾತನು ಅಕ್ರಮವಾಗಿ ಕಳ್ಳಬಟ್ಟಿ ತಯಾರಿಸಿ ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿ ನೀಡಿದ್ದು ಸದರಿ ಮಾಹಿತಿಯನ್ನು ಚಾಸಾ **2** ರವರು ಲಿಖಿತವಾಗಿ ದೂರನ್ನು ನೀಡಿ ಪರಿಶೀಲನೆ ನಡೆಸಿ ಕ್ರಮ ಕೈಗೊಳ್ಳಲು ಕೋರಿಕೊಂಡ ಮೇರೆಗೆ ಕೂಡಲೇ ಸ್ಥಳದಿಂದ ಸಿಬ್ಬಂದಿಗಳೊಂದಿಗೆ ಮಾಹಿತಿ ಇರುವ ಸ್ಥಳಕ್ಕೆ ಹೋದಾಗ ಮನೆಯ ಬಳಿ ದ್ವಿಚಕ್ರ ವಾಹನ ನಿಲ್ಲಿಸಿದ್ದು, ವಾಹನದ ಬಳಿ ಒಬ್ಬ ವ್ಯಕ್ತಿ ಕೈಯಲ್ಲಿ ಕ್ಯಾನ್ ಹಿಡಿದುಕೊಂಡು ನಿಂತಿದ್ದು, ನಮ್ಮನ್ನು ಕಂಡು ಕಾಫಿ ತೋಟದ ಮದ್ಯ ಓಡಿ ಹೋಗಿದ್ದು, ಸಿಬ್ಬಂದಿಗಳು ಆತನನ್ನು ಬೆನ್ನಟ್ಟಿ ಹಿಡಿದು ತಡೆದು

ನಿಲ್ಲಿಸಲು ಪ್ರಯತ್ನಿಸಲಾಗಿ ಸಾಧ್ಯವಾಗಲಿಲ್ಲ. ವಾಹನದ ಬಳಿ ಬಂದು ನೋಡಲಾಗಿ ಸುಮಾರು **10** ಕೆಜಿ ಸಾಮರ್ಥ್ಯದ ಕಪ್ಪು ಬಣ್ಣದ ಪ್ಲಾಸ್ಟಿಕ್ ಕೈ ಚೀಲದಲ್ಲಿ **2** ಲೀ. ಗಾತ್ರದ ಪ್ಲಾಸ್ಟಿಕ್ ಬಾಟಲಿ ಇದ್ದು, ಅದರಲ್ಲಿ ಕಳ್ಳಬಟ್ಟಿ ಸರಾಯಿ ಇರುತ್ತದೆ. ಸದರಿ ಸೀಸೆಗಳನ್ನು ದ್ವಿ ಚಕ್ರ ವಾಹನದ ಬಲ ಭಾಗದಲ್ಲಿರುವ ಹುಕ್ ಹಾಗೂ ಕ್ಯಾರಿಯರ್ ಗೆ ಮಾಸಿದ ಹಳದಿ ಬಣ್ಣದ ಹಗ್ಗದಲ್ಲಿ ಕಟ್ಟಲಾಗಿತ್ತು. ಸದರಿ ವಾಹನವನ್ನು ಶೋಧನೆ ನಡೆಸಲು ನ್ಯಾಯಾಲಯದಲ್ಲಿ ವಾರೆಂಟ್ ಪಡೆಯಲು ಕಾಳಾವಕಾಶ ಇಲ್ಲದ ಪ್ರಯುಕ್ತ ಹಾಗೂ ಅಕ್ಕ ಪಕ್ಕದಲ್ಲಿ ಪಂಚರಿಗೆ ಪ್ರಯತ್ನಿಸಲಗಿ ಯಾರು ದೊರೆಯದ ಕಾರಣ ಸ್ಥಳದಲ್ಲಿ ಶೊಧನನಾ ವಾರೆಂಟ್ ತಯಾರಿಸಿ ಇಲಾಖಾ ಸಿಬ್ಬಂದಿಗಳನ್ನು ಪಂಚರನ್ನಾಗಿ ಮಾಡಿಕೊಂಡು ಶೋಧನೆ ಮಾಡಲಾಗಿ ವಾಹನದ ಸಂಖ್ಯೆಃ ಕೆಎ.**09**.ಕೆ.**5443** ಆಗಿದ್ದು, ಹಿರೋ ಹೊಂಡಾ ಕಂಪನಿ ತಯಾರಿತ ದ್ವಿಚಕ್ರ ವಾಹನವಾಗಿರುತ್ತದೆ. ಸದರಿ ದೊರೆತ **2** ಲೀ. ಪ್ಲಾಟಿಕ್ ಸೀಸೆಯಲ್ಲಿ ಕಳ್ಳಬಟಿಯಿದ್ದು ಒಟ್ಟು **4** ಲೀ. ಕಳ್ಳಬಟ್ಟಿ ಸರಾಯಿ ಇರುತ್ತದೆ. ಮನೆಯ ಬಳಿ ನೋಡಲಾಗಿ ಮನೆಯ ಮುಂಬಾಗಿಲಿಗೆ ಬೀಗ ಹಾಕಲಾಗಿದ್ದು, ಮನೆಯ ಸುತ್ತ ಮುತ್ತ ಹುಡುಕಲಾಗಿ ಕಾಫಿ ತೋಟದ ಗಿಡಗಳ ಮಧ್ಯ ಇರುವ ಮರದ ಬುಡದಲ್ಲಿ ಸುಮಾರು **20** ಲೀ. ಗಾತ್ರದ **2** ಹಸಿರು ಬಣ್ಣದ ಬಿಂದಿಗೆಗಳು ಹಾಗೂ ಸುಮಾರು **20** ಲೀ. ಗಾತ್ರದ ಹಳದಿ ಬಣ್ಣದ ಒಂದು ಬಿಂದಿಗೆ ಇದ್ದು, ಒಟ್ಟು **60** ಲೀ. ಬೆಲ್ಲದ ಕೊಳೆ ಪತ್ತೆಯಾಗಿರುತ್ತದೆ. ದೊರತೆ ಕಳ್ಳಬಟ್ಟಿ ಸರಾಯಿಯಿಂದ ತಲಾ **180** ಮಿಲಿಯ ಎರಡು ಸೀಸೆಯಲ್ಲಿ ಹಾಗೂ ದೊರೆತ ಬೆಲ್ಲದ ಕೊಲೆಯಿಂದ ತಲಾ **180** ಮಿಲಿಯಂತೆ **3** ಸೀಸೆಗಳಲ್ಲಿ ಮಾದರಿಗಾಗಿ ತೆಗೆಯಲಾಯಿತು. ಅವುಗಳ ಬಾಯಿಗೆ ಬಟ್ಟೆ ಸುತ್ತಿ ದಾರದಿಂದ ಕಟ್ಟಿ ಅರಗಿನ ಸಹಾಯದಿಂದ ಸೀಲು ಮಾಡಲಾಯಿತು. ದೊರೆತ ಕಳ್ಳಬಟ್ಟಿ ಸರಾಯಿಯನ್ನು ವಶಕ್ಕೆ ಪಡೆದು ಉಳಿದ ಬೆಲ್ಲದ ಕೊಲೆಯನ್ನು ಸಾಗಾಟ ಮಾಡಲು ಅನಾನುಕೂಲವಾಗಿರುವುದರಿಂದ ಮೇಲಾಧಿಕಾರಿಗಳ ಅನುಮತಿ ಪಡೆದು ಸ್ಥಳದಲ್ಲಿ ನಾಶಪಡಿಸಲಾಯಿತು. ದ್ವಿ ಚಕ್ರ ವಾಹನವನ್ನು ಅಲ್ಲಿ ದೊರೆತ ಬೇರೆ ವಸ್ತುಗಳನ್ನು ಸಹ ಇಲಾಖಾ ವಶಕ್ಕೆ ಪಡೆದು ಸದರಿ ಮಹಜರ್ ಕ್ರಮ

**ಸಿಸಿ ಃ 452/2024**

**ಚಾಸಾ –1**

**ಪ್ರಾಸಾ –1**

ಜರುಗಿಸಲಾಯಿತು. ಮಹಜರ್ ಅನ್ನು ಬೆಳಿಗ್ಗೆ **10.20** ರಿಂದ **11.15** ರವರೆಗೆ ಜರುಗಿಸಿರುತ್ತೇನೆ. ಚಾಸಾ **2** ರವರು ವಾಹವನ್ನು ಚಲಾಯಿಸಿಕೊಂಡು ಕಚೇರಿಗೆ ತಂದಿರುತ್ತಾರೆ. ಪ್ರ,ವ.ವರದಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಅದೇ ದಿನ ಸದರಿ ಪ್ರಕರಣದಲ್ಲಿ ವಶಪಡಿಸಿಕೊಂಡ ಸ್ವತ್ತುಗಳನ್ನು ಇಲಾಖಾ ವಶದಲ್ಲಿ ಇಟ್ಟುಕೊಳ್ಳಲು ಮಾನ್ಯ ಪ್ರಾಧಿಕಾರದಿಂದ ಅನುಮತಿ ಪಡೆದಿರುತ್ತೇನೆ. ದಿಃ**03-05-2024** ರಂದು ಸದರಿ ಪ್ರಕರಣದ ಆರೋಪಿತನು ನ್ಯಾಯಾಲಯದಿಂದ ಜಾಮೀನು ಪಡೆದು ನನ್ನ ಮುಂದೆ ಹಾಜರಾಗಿರುತ್ತಾನೆ. ದಿಃ**24-05-2024** ರಂದು ಸದರಿ ಪ್ರಕರಣದ ಸ್ವತ್ತು ಹಾಗೂ ಕಡತಗಳೊಂದಿಗೆ ಚಾಸಾ **7** ರವರಿಗೆ ನೀಡಿರುತ್ತೇನೆ.

ಪ್ರ.ವ.ವರದಿಯನ್ನು ನಿಪಿ **1** ಎಂದು, ಸಹಿಯನ್ನು ನಿಪಿ **1**ಎ ಎಂದು, ನಿವೇದನೆ ಅನ್ನು ನಿಪಿ **2** ಎಂದು, ಸಹಿಯನ್ನು ನಿಪಿ **2**ಎ ಎಂದು, ದೂರನ್ನು ನಿಪಿ **3** ಎಂದು, ಸಹಿಯನ್ನು ನಿಪಿ **3**ಎ ಎಂದು, ಮಹಜರ್ ಅನ್ನು ನಿಪಿ **4** ಎಂದು, ಸಹಿಯನ್ನು ನಿಪಿ **4**ಎ ಎಂದು, ಶೋಧನಾ ವಾರೆಂಟ್ ಅನ್ನು ನಿಪಿ **5** ಎಂದು, ಸಹಿಯನ್ನು ನಿಪಿ **5**ಎ ಎಂದು, ಮಾದರಿ ಮೊಹರನ್ನು ನಿಪಿ **6** ಎಂದು, ಸಹಿಯನ್ನು ನಿಪಿ **6**ಎ ಎಂದು, **3** ಛಾಯಾ ಚಿತ್ರಗಳನ್ನು ನಿಪಿ **7** ರಿಂದ **9** ಎಂದು, ಸಿಡಿಯನ್ನು ನಿಪಿ **10** ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ **2** ಕಳ್ಳಬಟ್ಟಿ ಸರಾಯಿಯ ಮಾದರಿಗಳನ್ನು ಮುಮಾ **1** ಎಂದು, **3** ಬೆಲ್ಲದ ಪುಳಗಂಜಿ ಬಾಟಲಿಯನ್ನು ಮುಮಾ **2** ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಮುಖ್ಯ ವಿಚಾರಣೆ ಮುಕ್ತಾಯವಾಯಿತು.

ಪಾಟಿ ಸವಾಲುಃ ಶ್ರೀ. ಕೆ.ಹೆಚ್.ವಿ ವಕೀಲರಿಂದ

ದಾಳಿ ಮಾಡಿದ ನಂತರ ಪ್ರ.ವ.ವರದಿ ತಯಾರಿಸಿರುತ್ತೇನೆ. ಆಗ ಸಮಯ **12.15** ಆಗಿತ್ತು. ಮಹಜರ್ ಪ್ರಕ್ರಿಯೆ ಮಾಡಿ ನಂತರ ಪ್ರ,ವ.ವರದಿ

ದಾಖಲಿಸಲಾಯಿತು. ಚಾಸಾ 2 ನನಗೆ ದೂರು ನೀಡಿರುತ್ತಾರೆ. ಕಿರು ಬಿಳಹ ಗ್ರಾಮದಲ್ಲಿ ದಾಳಿ ಮಾಡಿರುತ್ತೇವೆ. ಅಲ್ಲಿ ಅಸುಪಾಸು 2 ಮನೆಗಳಿತ್ತು. ಕಿರು ಬಿಳಹ ಗ್ರಾಮದಲ್ಲಿ ನೂರಾರು ಮನೆಗಳು ಇವೆ ಎಂದರೆ ಸರಿ, ಆದರೆ ಘಟನಾ ಸ್ಥಳದಲ್ಲಿ 2 ಮನೆಗಳು ಇವೆ. ಆರೋಪಿ ಕಿರುಬಿಳಹ ಗ್ರಾಮದ ಮನೆಯ ಮುಂಭಾಗ ನಿಂತಿದ್ದರು. ಅದು ಹಂಚಿನ ಮನೆ. ಮನೆ ನಂ. ಮೀಟರ್ ನಂಬರ್ ನೋಡಲು ಪ್ರಯತ್ನ ಪಟ್ಟಿರುತ್ತೇವೆ ಆದರೆ ಮನೆಗೆ ಬೀಗ ಹಾಕಲಾಗಿತ್ತು. ಮೀಟರ್ ಬೋರ್ಡ್ ಮನೆಯ ಹೊರಗೆ ಇರುತ್ತದೆ ಎಂದರೆ ನಾನು ಗಮನಿಸಿಲ್ಲ. ಮನೆ ನಂಬರ್ ಮನೆಯ ಹೊರಗೆ ಇರುತ್ತದೆ ಎಂದರೆ ಸರಿಯಲ್ಲ. ನಾನು ಹೇಳಿದಂತಹ ಮನೆ ಆರೋಪಿಗೆ ಸೇರಿದೆ ಎನ್ನಲು ಮಾಹಿತಿ ಪಡೆದಿರುತ್ತೇನೆ. ವಿಚಾರಣೆ ಮಾಡಲು ಅಕ್ಕ ಪಕ್ಕ ಯಾರು ಇರಲಿಲ್ಲ. ಸಿಬ್ಬಂದಿಗಳು ನೀಡಿದ ಮಾಹಿತಿ ಆಧರಿಸಿ ಮನೆ ಆರೋಪಿಗೆ ಸೇರಿರುತ್ತದೆ ಎಂದು ತೀರ್ಮಾನಕ್ಕೆ ಬಂದಿರುತ್ತೇನೆ. ಆ ವಿಚಾರವನ್ನು ಮಹಜರ್ ನಲ್ಲಿ ನಮೂದಿಸಿಲ್ಲ. ದ್ವಿ ಚಕ್ರ ವಾಹನ ಆರೋಪಿಗೆ ಸೇರಿದೆ ಎನ್ನಲು ಆರೋಪಿ ಅದರ ಪಕ್ಕ ನಿಂತಿದ್ದ ಕಾರಣ ತೀರ್ಮಾನಿಸಿರುತ್ತೇನೆ. ವಾಹನದಲ್ಲಿ ಅದರ ದಾಖಲೆಗಳು ಇರಲಿಲ್ಲ. ಸಿಬ್ಬಂದಿಗಳು ಹೇಳಿದ ಕಾರಣ ಆರೋಪಿಗೆ ಸೇರಿದೆ ಎಂದು ತೀರ್ಮಾನಿಸಿರುತ್ತೇನೆ. ವಾಹನ ಆರೋಪಿಗೆ ಸೇರಿದೆ ಎನ್ನಲು ದಾಖಲೆ ವಶಪಡಿಸಿಕೊಂಡಿಲ್ಲ. ಕ್ಯಾನ್ ತಗೊಂಡು ಓಡಿ ಹೋಗಿರುತ್ತಾರೆ. ಆರೋಪಿ ಕಳ್ಳಬಟ್ಟಿ ಸರಾಯಿ ಮಾರಾಟ ಮಡಲು ಅಲ್ಲಿ ನಿಂತಿದ್ದರು. ಅಲ್ಲಿ ಯಾರು ಗಿರಾಕಿಗಳು ಇರಲಿಲ್ಲ. ಕಳ್ಳ ಬಟ್ಟಿಯನ್ನು ಕ್ಯಾನಿಂದ ನೇರವಾಗಿ ಕುಡಿಯಲು ಆಗುವುದಿಲ್ಲ. ಅಲ್ಲಿ ಲೋಟಗಳು ಸಹ ಇರಲಿಲ್ಲ. ಅಳತೆ ಮಾಡಲು ಪರಿಕರಗಳು ಇರಲಿಲ್ಲ. ಕೈ ಚೀಲ ವಾಹನದ ಬಲ ಭಾಗ ಇರುವ ಹುಕ್ಕು ಬಳಿ ಇತ್ತು. ನಿಪಿ 7 ರಲ್ಲಿ ಯಾವುದೇ ಬ್ಯಾಗ್ ನೇತಾಡುವುದು ಕಾಣುತ್ತಿಲ್ಲ ಎಂದರೆ ಸರಿ. ಛಾಯಾ ಚಿತ್ರದಲ್ಲಿ ಹಗ್ಗ ಕಾಣುತ್ತಿಲ್ಲ ಎಂದರೆ ಸರಿ. ಮನೆಗೆ ಬೀಗ ಹಾಕಲಾಗಿದ್ದು

ಆದ್ದರಿಂದ ಮನೆಯ ಒಳಗಡೆ ಹೋಗಿಲ್ಲ. ಮನೆಯಿಂದ 20 ಮೀಟರ್ ಅಂತರದಲ್ಲಿ ಕಾಫಿ ತೋಟ ಇತ್ತು. ಆ ತೋಟ ಯಾರಿಗೆ ಸೇರಿದೆ ಎಂದು ವಿಚಾರಣೆ ಮಾಡಿಲ್ಲ. ಅದರ ಸರ್ವೆ ನಂಬರ್ ತಿಳಿದುಕೊಂಡಿಲ್ಲ. ಕಾಫಿ ತೋಟ ಆರೋಪಿಗೆ ಸೇರಿದೆ ಎಂದು ಅಂದಾಜಿನಲ್ಲಿ ತೀರ್ಮಾನಿಸಿರುತ್ತೇನೆ. ನಿಪಿ 7 ರಿಂದ 9 ರಲ್ಲಿ ಯಾವುದೇ ಪುಳಗಂಜಿ ಕಾಣುತ್ತಿಲ್ಲ ಎಂದರೆ ಸರಿ. ಸದರಿ ಛಾಚಿತ್ರಗಳನ್ನು ನಾಶಪಡಿಸಿದ ನಂತರ ತೆಗೆದಿರುತ್ತೇನೆ. ನಾಶಪಡಿಸುತ್ತಿರುವ ಬಗ್ಗೆ ಛಾಯಾ ಚಿತ್ರಗಳು ಇಲ್ಲ. ನಿಪಿ 7 ರಿಂದ 9 ರಲ್ಲಿ ಹಳದಿ ಬಣ್ಣದ ಬಿಂದಿಗೆಗಳು ಕಾಣುತ್ತಿವೆ ಎಂದರೆ ಸರಿ. ನಿಪಿ 7 ರಲ್ಲಿ ಯಾವುದೇ ದ್ರವಣ ಇಲ್ಲ ಎಂದರೆ ಸರಿಯಲ್ಲ. ಹಸಿರು ಬಣ್ಣ ಇರುವುದರಿಂದ ಹೊರಗಡೆ ಕಾಣುವುದಿಲ್ಲ. ಛಾಯಾ ಚಿತ್ರಗಳನ್ನು ಮೊಬೈಲ್ ನಲ್ಲಿ ಕಾಂತರಾಜ್ ತೆಗೆದಿರುತ್ತಾರೆ. ನಿಪಿ 7 ರಿಂದ 9 ರಲ್ಲಿ ಸಮಯ ದಿನಾಂಕ ವರ್ಷ ಕಾಣುತ್ತಿಲ್ಲ ಎಂದರೆ ಸರಿ. ಸಿಡಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸಿಡಿ ಒಳಗಡೆ ಯಾವುದೇ ವಿಚಾರ ಇಲ್ಲ ಎಂದರೆ ಸರಿಯಲ್ಲ. ಬಿಂದಿಗೆಗಳ ಮೇಲೆ ಕಂಪನಿಯ ಹೆಸರು ಇರುತ್ತದೆ ಎಂದರೆ ಸರಿ. ಮಹಜರ್ ನಲ್ಲಿ ಆ ಬಗ್ಗೆ ನಮೂದು ಮಾಡಿಲ್ಲ. ನಾನು ಹೇಳುವಂತೆ ಯಾವುದೇ ಮಾಹಿತಿ ಬಂದಿಲ್ಲ ಎಂದರೆ ಸರಿಯಲ್ಲ. ನಾನು ದಾಳಿಗೆ ಹೋಗಿಲ್ಲ ಎಂದರೆ ಸರಿಯಲ್ಲ. ಅಲ್ಲಿ ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿಲ್ಲ ಮತ್ತು ನಾಶ ಮಾಡಿಲ್ಲ ಎಂದರೆ ಸರಿಯಲ್ಲ. ಮಹಜರ್ ಮೂಲಕ ಮಾದರಿ ತೆಗೆದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಆರೋಪಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಪಾಟಿ ಸವಾಲು ಮುಕ್ತಾಯವಾಯಿತು.
ಮರು ವಿಚಾರಣೆ ಇಲ್ಲ.
**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು** ಮಾಡಲಾಗಿದೆ**).**

ಸಹಿ/-
**ಓ ಹೇ ಕೇ ಸರಿ ಇದೆ**

**ಸಿಸಿ ಃ 452/2024**

**ಚಾಸಾ –1**

**ಪ್ರಾಸಾ –1**

**ಪ್ರ ದ ನ್ಯಾ ದಂ ಸೋ ಪೇಟೆ**